ದೂರವಾಣಿ:08282- 256166,7022254997

ವೆಬ್‌ಸೈಟ್: www.kuvempu.ac.in
ಇ-ಮೇಲ್: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವರು(ಮೌಲ್ಯಮಾಪನ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ. ಕರ್ನಾಟಕ.

Re-Accredited by NAAC with 'A' Grade, Ranked 73rd place in NIRF-2019 & 45th place at National Level in SCIMAGO Rankings

ಸಂಖ್ಯೆ:ಕುವಿ:ಪವಿ:ಯುಜಿ-2/06(ಪ್ರಾಪ)/2019-20/ 5487

ದಿನಾಂಕ:31.08.2019.
03.09

## ಅಧಿಸೂಚನೆ

**ವಿಷಯ: ಅಕ್ಟೋಬರ್-2019**ರಲ್ಲಿ ನಡೆಯುವ ಬಿ.ಎ/ಬಿ.ಎಸ್ಸಿ/ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಗಳ ಪ್ರಾಯೋಗಿಕ ಪರೀಕ್ಷೆಗಳಿಗೆ ಮುಖ್ಯ ಅಧೀಕ್ಷಕರುಗಳ ಹಾಗೂ ಕೋ-ಆರ್ಡಿನೇಟರುಗಳ ನೇಮಕಾತಿ ಮತ್ತು ಅವರಿಗೆ ಸೂಚನೆಗಳು.

**ಉಲ್ಲೇಖ:** ಕಛೇರಿ ಪರೀಕ್ಷಾ ಪ್ರಕಟಣೆ ಸಂಖ್ಯೆ: ಕುವಿ:ಪವಿ:ಯುಜಿ-2/5426/2019-20 ದಿನಾಂಕ: 30-08-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಅಕ್ಟೋಬರ್-2019**ರ ಪದವಿ ಪರೀಕ್ಷೆಗಳ ಪ್ರಾಯೋಗಿಕ ಪರೀಕ್ಷೆಗಳು **ದಿನಾಂಕ: 16-09-2019**ರಿಂದ ಪ್ರಾರಂಭವಾಗಲಿವೆ. ಸದರಿ ಪರೀಕ್ಷೆಗಳಿಗೆ ಆಯಾ ಕಾಲೇಜಿನ ಪ್ರಾಂಶುಪಾಲರನ್ನು ಮುಖ್ಯ ಅಧೀಕ್ಷಕರನ್ನಾಗಿ ಮತ್ತು ಈ ಕೆಳಕಂಡವರನ್ನು ಪ್ರಾಯೋಗಿಕ ಪರೀಕ್ಷಾ ಸಂಯೋಜನಾಧಿಕಾರಿಗಳನ್ನಾಗಿ (ಪ್ರಾಕ್ಟಿಕಲ್ ಕೋ-ಆರ್ಡಿನೇಟರ್)ನೇಮಕ ಮಾಡಲಾಗಿದೆ.

| ಕ್ರಸಂ | ವಿಷಯ | ಕೋ-ಆರ್ಡಿನೇಟರ್ ಹೆಸರು ಮತ್ತು ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 01 | ಭೌತಶಾಸ್ತ್ರ | ಶ್ರೀ. ಪ್ರಸನ್ನ.ಡಿ.ಜಿ<br>ಭೌತಶಾಸ್ತ್ರ ವಿಭಾಗ<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ | --- |
| 02 | ರಸಾಯನಶಾಸ್ತ್ರ ಮತ್ತು ಔದ್ಯೋಗಿಕ ರಸಾಯನಶಾಸ್ತ್ರ | ಡಾ.ಬಿ.ವಿ.ಮೋಹನ್ ಕುಮಾರ್<br>ರಸಾಯನಶಾಸ್ತ್ರ ವಿಭಾಗ<br>ಐ.ಡಿ.ಎಸ್.ಜಿ.ಕಾಲೇಜು, ಚಿಕ್ಕಮಗಳೂರು. | --- |
| 03 | ಕಂಪ್ಯೂಟರ್ ಸೈನ್ಸ್ ಮತ್ತು ಬಿ.ಸಿ.ಎ.,/ ಬಿ.ಎ ಕಂಪ್ಯೂಟರ್ ಅಪ್ಲಿಕೇಷನ್ | ಶ್ರೀ ಮಂಜುನಾಥ ಹೆಚ್.ಆರ್.<br>ಕಂಪ್ಯೂಟರ್ ಸೈನ್ಸ್ ವಿಭಾಗ<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ. | --- |
| 04 | ಎಲೆಕ್ಟ್ರಾನಿಕ್ಸ್ | ಶ್ರೀ ಎಸ್.ಡಿ.ಉಮೇಶ<br>ಎಲೆಕ್ಟ್ರಾನಿಕ್ಸ್ ವಿಭಾಗ<br>ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ. | --- |
| 05 | ಸಸ್ಯಶಾಸ್ತ್ರ ಮತ್ತು ಬೀಜ ತಂತ್ರಜ್ಞಾನ | ಡಾ.ರಾಜೇಶ್ವರಿ.ಎನ್.<br>ಸಸ್ಯಶಾಸ್ತ್ರ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | --- |
| 06 | ಪ್ರಾಣಿ ಶಾಸ್ತ್ರ ಮತ್ತು ರೇಷ್ಮೆ ಕೃಷಿ | ಡಾ.ಕುಮಾರಸ್ವಾಮಿ.ಎನ್.<br>ಪ್ರಾಣಿ ಶಾಸ್ತ್ರ ವಿಭಾಗ<br>ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ. | 9480338248 |
| 07 | ಜೈವಿಕ ತಂತ್ರಜ್ಞಾನ | ಶ್ರೀ ಮಂಜುನಾಥ್.ಕೆ.ಎಸ್.<br>ಜೈವಿಕ ತಂತ್ರಜ್ಞಾನ ವಿಭಾಗ<br>ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು. | 9972937373 |

ಮು.ತಿ.ನೋ

Shortcut Kb /A P co- Ordinator

| | | | |
|---|---|---|---|
| 08 | ಭೂ ವಿಜ್ಞಾನಶಾಸ್ತ್ರ ಜಿಯೋ ಎಕ್ಸ್‌ಪ್ಲೋರೇಶನ್ ಅಂಡ್ ಡ್ರಿಲ್ಲಿಂಗ್ ಟೆಕ್ನಾಲಜಿ | ಶ್ರೀ ಎಂ.ಈ.ಪಟೇಲ್.<br>ಭೂ ವಿಜ್ಞಾನ ಶಾಸ್ತ್ರ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ | 9900601276 |
| 09 | ಜೀವರಸಾಯನಶಾಸ್ತ್ರ | ಡಾ.ವರುಣ್ ಕುಮಾರ್.<br>ಜೀವರಸಾಯನಶಾಸ್ತ್ರ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | --- |
| 10 | ಸೂಕ್ಷ್ಮಾಣು ಜೀವಶಾಸ್ತ್ರ ಮತ್ತು ಔದ್ಯೋಗಿಕ ಸೂಕ್ಷ್ಮಾಣು ಜೀವಶಾಸ್ತ್ರ | ಡಾ.ಓಂಕಾರಪ್ಪ.ಆರ್.<br>ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗ,<br>ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | --- |
| 11 | ಗಣಿತ: ಸಂಖ್ಯಾಶಾಸ್ತ್ರ | ಶ್ರೀ. ಸಿ. ಶ್ರೀಧರ<br>ಗಣಿತ ವಿಭಾಗ<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್ ಪೇಟೆ | --- |
| 12 | ಪರಿಸರ ವಿಜ್ಞಾನ | ಡಾ. ನಾಗರಾಜ್.ಆರ್.ಎಸ್.<br>ಪರಿಸರ ವಿಜ್ಞಾನ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | ---- |
| 13 | ಗೃಹ ವಿಜ್ಞಾನ | ಶ್ರೀಮತಿ ಭಾರತಿ ಜಿ. ಕೆ.,<br>ಗೃಹ ವಿಜ್ಞಾನ ವಿಭಾಗ<br>ಎಸ್.ಟಿ.ಜೆ. ಮಹಿಳಾ ಕಾಲೇಜು,<br>ಚಿಕ್ಕಮಗಳೂರು | 9449122386 |
| 14 | ಗ್ರಂಥಾಲಯ ವಿಜ್ಞಾನ | ಡಾ.ಧರಣಿಕುಮಾರ್.ಪಿ<br>ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ. | 9741501214 |
| 15 | ಪತ್ರಿಕೋದ್ಯಮ | ಡಾ. ಸತ್ಯಪ್ರಕಾಶ್. ಎಂ. ಆರ್,<br>ಪತ್ರಿಕೋದ್ಯಮ ವಿಭಾಗ<br>ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ,<br>ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. | --- |
| 16 | ಸಮಾಜಶಾಸ್ತ್ರ, ಅಪರಾಧ ಶಾಸ್ತ್ರ ಮತ್ತು ಮನ:ಶಾಸ್ತ್ರ | ಶ್ರೀ ಎಂ.ಸಿ.ಲೋಕೇಶಪ್ಪ.<br>ಸಮಾಜಶಾಸ್ತ್ರ ವಿಭಾಗ,<br>ವಿಶ್ವವಿದ್ಯಾಲಯ ಕಲಾ ಮತ್ತು ವಾಣಿಜ್ಯ ಕಾಲೇಜು,<br>ಶಂಕರಘಟ್ಟ. | --- |
| 17 | ಪ್ರಾಕ್ತನಶಾಸ್ತ್ರ ಮತ್ತು ವಸ್ತು ಸಂಗ್ರಹಾಲಯಶಾಸ್ತ್ರ | ಶ್ರೀ. ದಿವಾಕರ.ಹೆಚ್.<br>ಇತಿಹಾಸ ವಿಭಾಗ,<br>ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ಹೊಸನಗರ. | --- |
| 18 | ಬಿ.ಎ (ದೈಹಿಕ ಶಿಕ್ಷಣ) | ಡಾ.ರವೀಂದ್ರಗೌಡ.ಎಸ್.ಎಂ.<br>ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ವಿಭಾಗ,<br>ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ | 9886852688 |
| 19 | ಬಿ.ಎಸ್.ಡಬ್ಲ್ಯೂ | ಪ್ರೊ:ರವೀಂದ್ರ ಗಡ್ಕರ್.<br>ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ವಿಭಾಗ<br>ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. | 9482687982 |

**ಮುಖ್ಯ ಅಧೀಕ್ಷಕರಿಗೆ ಸೂಚನೆಗಳು:-**

01. (ಎ): ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಎಸ್.ಡಬ್ಲ್ಯೂ ಸೆಮಿಸ್ಟರ್ ಪದವಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು **ದಿನಾಂಕ: 16.09.2019 ರಿಂದ ಪ್ರಾರಂಭಿಸಿ ದಿನಾಂಕ: 14.10.2019ರ** ಒಳಗೆ ಮುಕ್ತಾಯಗೊಳ್ಳುವಂತೆ ಸೂಚಿಸಿ ಈ ಪರೀಕ್ಷೆಗಳ ಕರಡು ವೇಳಾಪಟ್ಟಿಯನ್ನು ತಯಾರಿಸಿ ಆಯಾವಿಷಯಗಳಿಗೆ ಸಂಬಂಧಪಟ್ಟ ಪರೀಕ್ಷಾ ಸಂಯೋಜನಾಧಿಕಾರಿಗೆ (ಕೋ-ಆರ್ಡಿನೇಟರುಗಳಿಗೆ) **ದಿನಾಂಕ: 12-09-2019ರ** ಒಳಗಾಗಿ ತಲುಪುವಂತೆ ಕಳುಹಿಸಿ ಆದರ ಇನ್ನೊಂದು ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿಗೆ ಕಳುಹಿಸಬೇಕು.

*ಪು.ತಿ.ನೋ*

02. ಪ್ರಾಯೋಗಿಕ ಪರೀಕ್ಷೆಯ ಪ್ರತಿಯೊಂದು ತಂಡದಲ್ಲಿ **ಕನಿಷ್ಠ ಒಬ್ಬ ಬಾಹ್ಯ ಪರೀಕ್ಷಕರು** ಇರುವಂತೆ ನೋಡಿಕೊಳ್ಳಬೇಕು.

03. ಯಾರಾದರೂ ಬಾಹ್ಯ ಪರೀಕ್ಷಕರು ಬಾರದಿದ್ದಲ್ಲಿ ಹತ್ತಿರದ ಮತ್ತೊಂದು ಕಾಲೇಜಿನಿಂದ ಬಾಹ್ಯ ಪರೀಕ್ಷಕರನ್ನು ನೇಮಿಸಿ, ಇದನ್ನು ಸಂಬಂಧಪಟ್ಟ ಸಂಯೋಜನಾಧಿಕಾರಿಗೆ ಮತ್ತು ಕುಲಸಚಿವರು(ಪರೀಕ್ಷಾಂಗ)ರವರಿಗೆ ಅದೇ ದಿನವೇ ತಿಳಿಸಬೇಕು. ಒಂದುವೇಳೆ ಬಾಹ್ಯ ಪರೀಕ್ಷಕರು ಲಭ್ಯವಾಗದಿರುವ ಸಂದರ್ಭ ಬಂದರೆ, ಅಂತಹ ತಂಡದ ಪ್ರಾಯೋಗಿಕ **ಪರೀಕ್ಷೆಯನ್ನು ರದ್ದುಪಡಿಸಿ ಮುಂದೂಡಬೇಕು.** ಹಾಗೂ ತತ್ಸಂಬಂಧವಾಗಿ ವಿಷಯವನ್ನು ಅಂದೇ ಕುಲಸಚಿವರು(ಪರೀಕ್ಷಾಂಗ)ರವರಿಗೆ ತಿಳಿಸಬೇಕು.

04. ಯಾವುದೇ ಕಾರಣಕ್ಕೂ ಒಂದು ತಂಡಕ್ಕೆ ಇಬ್ಬರೂ ಆಂತರಿಕ ಪರೀಕ್ಷಕರಾಗಿರಕೂಡದು. ಮತ್ತು ವಿಶ್ವವಿದ್ಯಾಲಯದಿಂದ ಅನುಮೋದಿತಗೊಂಡ ಪರೀಕ್ಷಕರ ಪಟ್ಟಿಯಲ್ಲಿದ್ದವರನ್ನು ಮಾತ್ರ ಪರೀಕ್ಷಕರನ್ನಾಗಿ ನೇಮಿಸಬೇಕು.

05. ಯಾವುದೇ ಒಂದು ವಿಷಯದಲ್ಲಿ ಅಭ್ಯರ್ಥಿಗಳ ಸಂಖ್ಯೆ 10 ಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಅವರ ಪ್ರಾಯೋಗಿಕ ಪರೀಕ್ಷೆಯನ್ನು ಹತ್ತಿರದ ಮತ್ತೊಂದು ಕಾಲೇಜಿನಲ್ಲಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಲು ಕೋರಿ ಸಂಬಂಧಪಟ್ಟಸಂಯೋಜಕರಿಗೆ ಹಾಗೂ ಕುಲಸಚಿವರು(ಪರೀಕ್ಷಾಂಗ) ಇವರಿಗೆ ತಿಳಿಸಬೇಕು.

06. ನಿಗದಿಪಡಿಸಿದ ತಂಡದಲ್ಲಿ ಅಭ್ಯರ್ಥಿ ಪರೀಕ್ಷೆಗೆ ಹಾಜರಾಗುವಂತೆ ನೋಡಿಕೊಳ್ಳಬೇಕು.

07. ಪ್ರಾಯೋಗಿಕ ಪರೀಕ್ಷೆ ನಡೆದಾಗ ಪ್ರತಿ ದಿನ ಪ್ರತಿ ವಿಷಯದಲ್ಲಿ ನಡೆಸಲಾದ ಎರಡು ತಂಡಗಳ ಅಂಕತಃಖ್ತೆಗಳನ್ನು Online student Information System ನಲ್ಲಿ ದಾಖಲಿಸಿ. ನಂತರ ಅಂಕತಃಖ್ತೆಯನ್ನು ಮುದ್ರಿಸಿ ತಂಡದ ಪರೀಕ್ಷಕರ ಸಹಿಯೊಂದಿಗೆ ಮೊಹರು ಮಾಡಿದ ಲಕೋಟೆಗಳಲ್ಲಿ ಆಯಾ ವಿಷಯದ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಕೂಡಲೇ ಕುಲಸಚಿವರು(ಪರೀಕ್ಷಾಂಗ)ಇವರಿಗೆ ಕಳುಹಿಸಿಕೊಡಬೇಕು.

**08.** ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಕ್ರೋಢಿಕೃತ ಕಾರ್ಯನಿರ್ವಹಣಾ ತಃಖ್ತೆಯನ್ನು ವಿಶ್ವವಿದ್ಯಾಲಯ ನಿಗದಿಪಡಿಸಿದ ನಮೂನೆಯಲ್ಲಿ ಕುಲಸಚಿವರು(ಪರೀಕ್ಷಾಂಗ)ಇವರಿಗೆ ಪ್ರಾಯೋಗಿಕ ಪರೀಕ್ಷೆ ಮುಗಿದ **15 ದಿನಗಳೊಳಗಾಗಿ ಸಲ್ಲಿಸಬೇಕು.**

**09. ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವಾಗ ಅಂಕತಃಖ್ತೆಯನ್ನು ಸರಿಯಾಗಿ ಬರೆಯದೆ ತಪ್ಪಾಗಿ ದಾಖಲಿಸುವುದು ಕಂಡುಬರುತ್ತದೆ. ಈ ಬಗ್ಗೆ ಇಬ್ಬರೂ ಪರೀಕ್ಷಕರುಗಳು ಹೆಚ್ಚಿನ ಗಮನ ಹರಿಸಿ ತಪ್ಪುಗಳು ಆಗದಂತೆ ಎಚ್ಚರಿಕೆ ವಹಿಸುವುದು.**

**ಪ್ರಾಯೋಗಿಕ ಪರೀಕ್ಷೆಗಳ ಸಂಯೋಜನಾಧಿಕಾರಿಗಳಿಗೆ (ಕೋ–ಆರ್ಡಿನೇಟರುಗಳಿಗೆ) ಸೂಚನೆಗಳು:–**

01. ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಎಸ್.ಡಬ್ಲ್ಯೂ ಸೆಮಿಸ್ಟರ್ ಪದವಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು **ದಿನಾಂಕ: 16–09–2019** ರಿಂದ **ಪ್ರಾರಂಭಿಸಿ ದಿನಾಂಕ: 14–10–2019** ಒಳಗೆ ಮುಕ್ತಾಯಗೊಳಿಸಬೇಕು.

02. ಪ್ರಾಯೋಗಿಕ ಪರೀಕ್ಷೆಗಳ ಎಲ್ಲಾ ಸಂಯೋಜನಾಧಿಕಾರಿಗಳು ತಮಗೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರನ್ನು ಪ್ರಾಯೋಗಿಕ ಪರೀಕ್ಷೆ ನಡೆಸುವ ಸಂಬಂಧ ಕೂಡಲೇ ಸಂಪರ್ಕಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

03. ವಿಶ್ವವಿದ್ಯಾಲಯದಿಂದ **ಅನುಮೋದಿಸಲ್ಪಟ್ಟ ಪರೀಕ್ಷಕರ ಪಟ್ಟಿಯಿಂದಲೇ** ಪ್ರಾಯೋಗಿಕ ಪರೀಕ್ಷಕರನ್ನು ಆಯ್ಕೆ ಮಾಡಬೇಕು. ಪ್ರಾಯೋಗಿಕ ಪರೀಕ್ಷೆಯ ಪ್ರತಿ ತಂಡಕ್ಕೆ ಇಬ್ಬರು ಪರೀಕ್ಷಕರಾಗಿದ್ದು, ಅವರಲ್ಲಿ ಒಬ್ಬರು ಆಂತರಿಕ ಪರೀಕ್ಷಕರೂ, ಇನ್ನೊಬ್ಬರು ಬಾಹ್ಯ ಪರೀಕ್ಷಕರು ಆಗಿರಬೇಕು. **ಅಸಾಧಾರಣ ಸಂದರ್ಭಗಳಲ್ಲಿ ಈರ್ವರೂ ಬಾಹ್ಯ ಪರೀಕ್ಷಕರಾಗಿರಬಹುದು.**

04. ಬಾಹ್ಯ ಪರೀಕ್ಷಕರನ್ನು ನೇಮಕ ಮಾಡುವಾಗ ಆದಷ್ಟು ಹತ್ತಿರದ ಕಾಲೇಜುಗಳಿಂದ ಆಯ್ಕೆ ಮಾಡಬೇಕೇ ವಿನಃ ದೂರದ ಕಾಲೇಜುಗಳಿಂದಲ್ಲ. ದೂರದ ಕಾಲೇಜುಗಳಿಂದ ಆಯ್ಕೆಮಾಡಿದ್ದಲ್ಲಿ ಅವರ ಪ್ರಯಾಣ ಹಾಗೂ ದಿನಭತ್ಯೆಗಳ ಹುಂಡಿಗಳನ್ನು ಮಾನ್ಯಮಾಡಲಾಗುವುದಿಲ್ಲ.

05. ಒಬ್ಬ ಬಾಹ್ಯ ಪರೀಕ್ಷಕರಿಗೆ ಒಂದು ಅಥವಾ ಎರಡು ಕಾಲೇಜುಗಳಲ್ಲಿ ಮಾತ್ರ ಈ ಪ್ರಾಯೋಗಿಕ ಪರೀಕ್ಷಾ ಕೆಲಸ ವಹಿಸಬೇಕು.

*ಮು.ತಿ.ನೋ*

06. ಒಂದು ಪರೀಕ್ಷಾ ಕೇಂದ್ರದಲ್ಲಿ ಒಬ್ಬ ಪರೀಕ್ಷಕರಿಗೆ ಸಾಕಾಗುವಷ್ಟು ಪರೀಕ್ಷಾ ಕೆಲಸವಿದ್ದಾಗ ಅವರ ಭಾಗದ ಆ ಕೆಲಸವನ್ನು ಅದೇ ಕೇಂದ್ರದಲ್ಲಿ ಕೊಡಬೇಕು. ಯಾವುದೇ ಸಂದರ್ಭದಲ್ಲಿಯೂ ಭಾಗಶಃ ಕೆಲಸವನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಒಬ್ಬರಿಗೆ ಕೊಡಬಾರದು.

07. ಸಾಧ್ಯವಾದ ಮಟ್ಟಿಗೆ ಎಲ್ಲಾ ಅರ್ಹ ಪರೀಕ್ಷಕರಿಗೆ, ಅವರ ಸೇವಾ ಜೇಷ್ಠತೆ ಮತ್ತು ಅವರ ಪದನಾಮಗಳನ್ನು ಲೆಕ್ಕಿಸದೇ ಪ್ರಾಯೋಗಿಕ ಪರೀಕ್ಷಾ ಕಾರ್ಯದ ಹಂಚಿಕೆಯನ್ನು ಸಮಾನವಾಗಿ ಮಾಡಬೇಕು.

08. ಸಂಯೋಜನಾಧಿಕಾರಿಗಳು, ಮುಖ್ಯ ಅಧೀಕ್ಷಕರಿಗೆ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷಾ ತಂಡಗಳನ್ನು ರಚಿಸಿ, ಕರಡು ವೇಳಾಪಟ್ಟಿಯನ್ನು ಸಲ್ಲಿಸುವಂತೆ ಕೋರುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸುವಂತೆ ತಿಳಿಸಬೇಕು.

ಅ. ಪ್ರತಿಯೊಂದು ಪ್ರಯೋಗಾಲಯದಲ್ಲಿ ದಿನ ಒಂದಕ್ಕೆ ಎರಡು ತಂಡಗಳ ಪರೀಕ್ಷೆಗೆ ವ್ಯವಸ್ಥೆಗೊಳಿಸತಕ್ಕದ್ದು.

ಆ. ಸಾಮಾನ್ಯವಾಗಿ ಪ್ರತಿ ತಂಡದಲ್ಲಿ **10ಜನ ವಿದ್ಯಾರ್ಥಿಗಳು ಇರತಕ್ಕದ್ದು**. 10ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಆ ಪರೀಕ್ಷೆಯ ಕಡೆಯ ತಂಡಕ್ಕೆ ಸೇರಿಸತಕ್ಕದ್ದು. ಒಂದು ವೇಳೆ ಪ್ರತಿ ತಂಡಕ್ಕೆ 10 ಜನ ವಿದ್ಯಾರ್ಥಿಗಳನ್ನು ಹಂಚಲು ಪ್ರಯೋಗಶಾಲೆಯಲ್ಲಿ ಅವಕಾಶಗಳಿಲ್ಲದಿದ್ದಲ್ಲಿ, ಸದರಿ ಅಂಶವನ್ನು ಕರಡು ವೇಳಾಪಟ್ಟಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಇ. ಒಂದು ವೇಳೆ ಯಾವುದೇ ವರ್ಷದ (ಉದಾ: ಪ್ರಥಮ ವರ್ಷದ) ಅಂತಿಮ ತಂಡದ ಪ್ರಾಯೋಗಿಕ ಪರೀಕ್ಷೆಯು ಯಾವುದೇ ದಿನದ ಪೂರ್ವಾಹ್ನ ಮುಕ್ತಾಯಗೊಂಡಲ್ಲಿ, ನಂತರದ ವರ್ಷಗಳ (ಉದಾ: ದ್ವಿತೀಯ ಅಥವಾ ತೃತೀಯ ವರ್ಷದ) ಪ್ರಾಯೋಗಿಕ ಪರೀಕ್ಷೆಗಳ ಪ್ರಥಮ ತಂಡದ ಪರೀಕ್ಷೆಯನ್ನು **ಅದೇ ದಿನದ ಅಪರಾಹ್ನ ಆರಂಭಿಸಬೇಕು.**

09. ಪ್ರಾಯೋಗಿಕ ಪರೀಕ್ಷೆ ನಡೆದಾಗ ಪ್ರತಿ ದಿನ, ಪ್ರತಿ ವಿಷಯದಲ್ಲಿ ನಡೆಸಲಾದ ಎರಡೂ ತಂಡಗಳ ಅಂಕತಃಖ್ತೆಗಳನ್ನು ಆಯಾ ತಂಡದ ಅಂಕತಃಖ್ತೆ ಲಕೋಟೆಯಲ್ಲಿಟ್ಟು ಮೊಹರು ಮಾಡಬೇಕು. ಲಕೋಟೆಯ ಮೇಲೆ ಕಾಣಿಸಿದ ಪ್ರತಿಯೊಂದು ಮಾಹಿತಿಯನ್ನು ಸ್ಪಷ್ಟವಾಗಿ ಬರೆಯಲು ಆಯಾ ಪರೀಕ್ಷಕರಿಗೆ ತಿಳಿಸಬೇಕು. ಆ ಕೇಂದ್ರದ ಆಯಾ ದಿನದ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಕೂಡಲೇ ವಿಷಯವಾರು/ಸೆಮಿಸ್ಟರ್‌ವಾರು ಮೊಹರು ಮಾಡಿದ **ಅಂಕತಃಖ್ತೆಯನ್ನಿಟ್ಟ ಲಕೋಟೆಗಳನ್ನು ಮತ್ತು ಆಯಾ ವಿಷಯದ ಪ್ರಾಯೋಗಿಕ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಪ್ರತ್ಯೇಕವಾಗಿ** ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸಲ್ಲಿಸಬೇಕು.

10. ಪ್ರಾಯೋಗಿಕ ಪರೀಕ್ಷೆಯ ಅಂಕತಃಖ್ತೆಯಲ್ಲಿ (ಮಾರ್ಕ್‌ಲಿಸ್ಟ್ / ಎ ಫಾರಂ) / ಲಕೋಟೆಯ ಮೇಲೆ ಕೆಳಕಂಡ ಮಾಹಿತಿಯನ್ನು ಕಡ್ಡಾಯವಾಗಿ ತಿಳಿಸತಕ್ಕದ್ದು.

01. ಪರೀಕ್ಷೆಯ ದಿನಾಂಕ.
02. ಸೆಮಿಸ್ಟರ್
03. ವಿಷಯ / ಪತ್ರಿಕೆಯ ಕೋಡ್ ನಂಬರ್.
04. ನೋಂದಣಿ ಸಂಖ್ಯೆ ಎಲ್ಲಾ ಎಂಟು ಅಂಕೆಗಳು (ವಿಷಯದ ಕೋಡ್ ನಂಬರ್‌ಗಳನ್ನು ಆಯಾ ಕಾಲೇಜಿನ ಮುಖ್ಯ ಅಧೀಕ್ಷಕರಿಂದ ಪಡೆಯಬೇಕೆಂದು ಪರೀಕ್ಷಕರಿಗೆ ತಿಳಿಸಬೇಕು).

11. ಅಂತಿಮ ಬಿ.ಎಸ್ಸಿಯ ಪ್ರಾಯೋಗಿಕ ಪರೀಕ್ಷೆಯಲ್ಲಿ ಒಂದು ವಿಷಯಕ್ಕೆ ಒಂದಕ್ಕಿಂತ ಹೆಚ್ಚು ಪ್ರಾಯೋಗಿಕ ಪರೀಕ್ಷೆಗಳಿದ್ದು, ಒಂದೇ ದಿನ ಒಂದೇ ವೇಳೆಯಲ್ಲಿ ಆ ತಂಡದ ಅರ್ಧದಷ್ಟು ಅಭ್ಯರ್ಥಿಗಳಿಗೆ ಒಂದು ಪರೀಕ್ಷೆ, ಇನ್ನುಳಿದ ವಿದ್ಯಾರ್ಥಿಗಳಿಗೆ ಇನ್ನೊಂದು ಪರೀಕ್ಷೆಯನ್ನು ನಡೆಸಿದ್ದೇಯಾದರೆ, ಅಂತಹ ತಂಡಕ್ಕೆ ಎರಡು ಪ್ರತ್ಯೇಕ ಅಂಕಪಟ್ಟಿಗಳನ್ನು ತಯಾರಿಸಬೇಕೆಂದು ಆ ತಂಡದ ಪರೀಕ್ಷಕರಿಗೆ ತಿಳಿಸತಕ್ಕದ್ದು. ಉದಾ: ಭೌತಶಾಸ್ತ್ರದ ಪ್ರಾಯೋಗಿಕ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆ–3 ಹಾಗೂ ಪ್ರಾಯೋಗಿಕ ಪರೀಕ್ಷೆ–4 ಎಂದು ಎರಡು ಪರೀಕ್ಷೆಗಳಿದ್ದು ಈ ಎರಡೂ ಪರೀಕ್ಷೆಗಳನ್ನು ಒಂದೇ ದಿನದ ಅದೇ ತಂಡದಲ್ಲಿ ಅರ್ಧದಷ್ಟು ಅಭ್ಯರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆ–3 ಹಾಗೂ ಇನ್ನೂಳಿದ ಅರ್ಧದಷ್ಟು ವಿದ್ಯಾರ್ಥಿಗಳಿಗೆ ಪರೀಕ್ಷೆ–4ನ್ನು ನಡೆಸಲಾಗುವುದು. ಇಂತಹ ಸಂದರ್ಭಗಳಲ್ಲಿ ಪ್ರಾಯೋಗಿಕ ಪರೀಕ್ಷೆ–3ನ್ನು ಮುಗಿಸಿದ **ಅಭ್ಯರ್ಥಿಗಳಿಗಾಗಿ ಅಂಕಪಟ್ಟಿ ಬೇರೆ ಹಾಗೂ ಪ್ರಾಯೋಗಿಕ ಪರೀಕ್ಷೆ–4ನ್ನು ಮಾಡಿದ ಅಭ್ಯರ್ಥಿಗಳಿಗೆ** ಬೇರೆ ಬೇರೆ ಅಂಕಪಟ್ಟಿಯನ್ನು ತಯಾರಿಸಿ **ಬೇರೆ ಬೇರೆ ಲಕೋಟೆಗಳಲ್ಲಿ ಇಟ್ಟು** ಆ ಲಕೋಟೆಗಳ ಮೇಲೆ ಅದರಲ್ಲಿರುವ ಅಂಕಪಟ್ಟಿ ಯಾವ ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಪಟ್ಟಿದ್ದು ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು, ನಂತರ ಮೊಹರು ಮಾಡಬೇಕು ಎಂದು ಆ ತಂಡದ ಪರೀಕ್ಷಕರಿಗೆ ತಿಳಿಸತಕ್ಕದ್ದು.

12 ಪ್ರಾಯೋಗಿಕ ಪರೀಕ್ಷೆಯ ಅಂಕಪಟ್ಟಿಯಲ್ಲಿ ಮೌಖಿಕ ಪರೀಕ್ಷೆಯ(ವೈವಾ) ಅಂಕಗಳನ್ನು ಅಥವಾ ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ಯಾವ ಕಾರಣಕ್ಕೂ ರೆಕಾರ್ಡ್‌ಗೆ ನೀಡಿರುವ ಅಂಕಗಳೊಂದಿಗೆ ಸೇರಿಸಕೂಡದು. ಆದರೆ ಮೌಖಿಕ (ವೈವಾ) ಅಂಕಗಳನ್ನು ಪ್ರಾಯೋಗಿಕ ಪೇಪರ್ ಅಂಕಗಳಿಗೆ ಸೇರಿಸಬೇಕು. ಅಂಕಪಟ್ಟಿಯಲ್ಲಿ ರೆಕಾರ್ಡ್ ಅಂಕಗಳನ್ನು ಪ್ರತಿ ಅಭ್ಯರ್ಥಿಗೆ ಪ್ರತ್ಯೇಕವಾಗಿ ನಮೂದಿಸಿರತಕ್ಕದ್ದು ಹಾಗೂ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು ಈ ವಿಷಯವನ್ನು ಆಯಾ ಕೇಂದ್ರದ ಸಂಬಂಧಪಟ್ಟ ಪ್ರಾಯೋಗಿಕ ಪರೀಕ್ಷಕರಿಗೆ ಸ್ಪಷ್ಟವಾಗಿ ತಿಳಿಸಬೇಕು.

13 ಪ್ರತಿಯೊಂದು ತಂಡದ ಪ್ರಾಯೋಗಿಕ ಪರೀಕ್ಷಾ ಅಂಕಪಟ್ಟಿಯನ್ನು ಏಕ ಪ್ರತಿಯಲ್ಲಿ ತಯಾರಿಸಲು ಸಂಬಂಧಪಟ್ಟ ಪರೀಕ್ಷಕರಿಗೆ ತಿಳಿಸತಕ್ಕದ್ದು.

14 ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಪಟ್ಟ ವಿಷಯವಾರು ಕ್ರೋಢೀಕೃತ ಕಾರ್ಯ ನಿರ್ವಹಣಾ ತಃಖ್ತೆ ಹಾಗೂ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಧೃಡೀಕರಿಸಿ ಕುಲಸಚಿವರು(ಪರೀಕ್ಷಾಂಗ)ಇವರ ಕಛೇರಿಗೆ ಪ್ರಾಯೋಗಿಕ ಪರೀಕ್ಷೆ ಮುಗಿದ 15 ದಿನಗಳೊಳಗಾಗಿ ವಿಶ್ವವಿದ್ಯಾಲಯ ನಿಗದಿಪಡಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

15 ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ನೀಡುವ ಸೂಚನೆಗಳನ್ನು ಪರೀಕ್ಷಕರಿಗೆ ಕಳುಹಿಸತಕ್ಕದ್ದು.

16 Onlineನಲ್ಲಿ ಪ್ರಾಯೋಗಿಕ ಪರೀಕ್ಷೆಯ ಅಂಕ ದಾಖಲಿಸುವ ಸಂಧರ್ಭದಲ್ಲಿ ಸಮಸ್ಯೆಗಳು / ಸಂಶಯಗಳು ಇದ್ದಲ್ಲಿ ವಿಶ್ವವಿದ್ಯಾಲಯದ ಕಂಪ್ಯೂಟರ್ ಪ್ರೋಗ್ರಾಮರ್ ಶ್ರೀ. ಬಸವರಾಜ್ ಅವರನ್ನು ಸಂಪರ್ಕಿಸುವುದು ಅಥವಾ logisysನ ಸಹಾಯವಾಣಿ ಸಂಖ್ಯೆ (**8183098136/138**)ಗೆ ಸಂಪರ್ಕಿಸಬಹುದು.

***<u>ವಿಶೇಷ ಸೂಚನೆ</u>***

ವಿಶ್ವವಿದ್ಯಾಲಯದ ಸೂಚನೆಯಂತೆ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಯ ತಂಡ ನಿರ್ವಹಣೆ ಹಾಗೂ ಅಂಕಗಳನ್ನು ಕಡ್ಡಾಯವಾಗಿ oasis.logisys.org/kus ನಲ್ಲಿ ದಾಖಲಿಸಲು ಸೂಚಿಸಿದೆ.

3/9/19

(ಪ್ರೊ. ರಾಜಾನಾಯಕ)
ಕುಲಸಚಿವರು(ಪರೀಕ್ಷಾಂಗ)

ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ

ಗೆ,

01. ಕುವೆಂಪು ವಿಶ್ವವಿದ್ಯಾನಿಲಯದ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
02. ಪ್ರಾಯೋಗಿಕ ಪರೀಕ್ಷೆಯ ಎಲ್ಲಾ ಸಂಯೋಜನಾಧಿಕಾರಿಗಳಿಗೆ.

**ಪ್ರತಿಗಳು,**

01. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
02. ನಿರ್ದೇಶಕರು, ಪಿ.ಎಂ.ಇ. ಮಂಡಳಿ, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ.
03. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ-ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
04. ಉಪಕುಲಸಚಿವರು:ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
05. ಅಧೀಕ್ಷಕರು, ಕಂಪ್ಯೂಟರ್ ವಿಭಾಗ / ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
06. ಸರ್ಕಾರಿ ಲೆಕ್ಕ ಪರಿಶೋಧಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
07. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ಸರ್ಕಾರಿ ಲೆಕ್ಕಪರಿಶೋಧಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
08. ಸಂಯೋಜಕರು, UCCF ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
09. ಕಛೇರಿ ಪ್ರತಿ.

Shortcut Kb /A P co- Ordinator